ಮಕ್ಕಳಿಗೋಸ್ಕರ ಪುಸ್ತಕ ಪ್ರಕಟಿಸುತ್ತೇವೆ ಎಂದು ಪಣ ತೊಟ್ಟಿವೆ. ನಮ್ಮಲ್ಲಿ ಪುಸ್ತಕಗಳ ಅಲಭ್ಯತೆಯೂ ಓದಿನ ಹಿನ್ನಡೆಗೆ ಕಾರಣವಾಗಿದೆ. ಗ್ರಾಮೀಣ ಭಾಗದಲ್ಲಿ ಗ್ರಂಥಾಲಯಗಳಿಲ್ಲ. ಇದ್ದರೂ ಅಲ್ಲಿ ಮಕ್ಕಳನ್ನು ಸೆಳೆಯುವ ಪುಸ್ತಕಗಳಿಲ್ಲ. ದೊಡ್ಡ ನಗರಗಳ ಇಂಗ್ಲಿಷ್ ಮೀಡಿಯಂ ಸ್ಕೂಲ್‌ಗಳ ವ್ಯಾಪ್ತಿಯಲ್ಲಿ ದೊಡ್ಡ ದೊಡ್ಡ ಪ್ರಕಾಶಕರು ಹುಟ್ಟಿಕೊಂಡಿದ್ದು ಅವರಿಗೆ ದೊಡ್ಡ ಮಾರುಕಟ್ಟೆಯೂ ದೊರೆತಿವೆ. ಕನ್ನಡಕ್ಕೆ ಈ ಸಾಧ್ಯತೆ ಇಲ್ಲದಿರುವುದೇ ನಿಮ್ಮಲ್ಲಿ ಇಂಥ ಪ್ರಶ್ನೆಗಳು ಉದ್ಭವವಾಗಲು ಕಾರಣವಾಗಿದೆ.

**4**

ಈ ಪ್ರಶ್ನೆಯೇ ಕೃತಕವಾದ ಬರವಣಿಗೆಯನ್ನು ಸೂಚಿಸುತ್ತದೆ. ಒಬ್ಬ ಲೇಖಕನೊಳಗೆ ಇರುವ ತೀರದ ತುಡಿತವೇ ಬರವಣಿಗೆಯ ಹುಟ್ಟಿಗೆ ಕಾರಣವಾಗುತ್ತದೆ. ಒಂದಿಷ್ಟು ಉದ್ದೇಶಗಳನ್ನು ಇಟ್ಟುಕೊಂಡು ಬರೆಯುವುದು ಸಿಲಬಸ್ ಆಗುತ್ತದೆಯಲ್ಲವೇ? ನವೋದಯ ಸಂದರ್ಭದಿಂದ ಹೀಗೆ ಗ್ರಹಿಸಿಕೊಂಡು ಬರಲಾಗುತ್ತಿದೆ. ಮೊದಲು ಅದನ್ನು ತಲೆಯಿಂದ ತೆಗೆದುಹಾಕಬೇಕಿದೆ. ನಾನು ಯಾವತ್ತೂ ನನಗೋಸ್ಕರವೇ ನನ್ನನ್ನು ತೆರೆದುಕೊಳ್ಳುವ ಭಾಗವಾಗಿ ಬರೆಯುವ ಪ್ರಯತ್ನ ಮಾಡುತ್ತಿರುತ್ತೇನೆ. ಅದು ಹೆಚ್ಚಾಗಿ ಬಾಲ್ಯದ ಅನುಭವಗಳೇ ಇರುವುದರಿಂದ ಅದಕ್ಕೆ ಮಕ್ಕಳ ಸಾಹಿತ್ಯವೆಂದು ಕರೆಯಲಾಗುತ್ತಿದೆ. ಆದರೆ ನನ್ನ ಬರಹ ಎಲ್ಲರೂ ಓದಬಹುದಾದ ಸಾಹಿತ್ಯ ಆಗಿದೆ ಎಂದು ನನ್ನ ಅಭಿಪ್ರಾಯ.

**5**

ಮಕ್ಕಳ ಸಾಹಿತ್ಯವೆಂದರೆ ಮಕ್ಕಳಿಗಾಗಿ ಸೃಷ್ಟಿಮಾಡುವ ಪ್ರತ್ಯೇಕವಾದ ಬರವಣಿಗೆ ಎನ್ನುವುದೇ ತಪ್ಪು. ಮಕ್ಕಳನ್ನು ಮುಂದಿಟ್ಟುಕೊಂಡು ಅವರನ್ನು ಬೆಳೆಸುವ ಮಾದರಿಯ ಬರವಣಿಗೆ ಆರಂಭದಲ್ಲಿತ್ತು. ಹಾಗಿದ್ದಾಗ್ಯೂ ಕುವೆಂಪು, ದಿನಕರ ದೇಸಾಯಿ ಮುಂತಾದ ಹಲವರು ತಮ್ಮದೇ ಬದುಕಿನ ಅಗತ್ಯಗಳನ್ನು ಇಟ್ಟುಕೊಂಡು ಬರೆದರು. ಅದು ಯಶಸ್ವಿಯೂ ಆಗಿದೆ. ಇತ್ತೀಚೆಗೆ ಮಕ್ಕಳ ಸಾಹಿತ್ಯವೇ ಒಂದು ಗಂಭೀರವಾದ ಸಾಹಿತ್ಯ ಪ್ರಕಾರ, ಅದಕ್ಕೂ ಅಗ್ರಮಾನ್ಯ ಮನ್ನಣೆ ಬೇಕು ಎಂದು ಫಿಲಿಪ್ ಪುಲ್‌ಮನ್, ಸಿ.ಎಸ್. ಲೂಯಿಸ್, ಜೆ.ಆರ್. ಆರ್. ಟಾಲ್ಕಿಯಾನ್, ಕನ್ನಡದ ಆನಂದ ಪಾಟೀಲ, ತಮ್ಮಣ್ಣ ಬೀಗಾರ ಇವರೆಲ್ಲಾ ಇದೇ ನನ್ನ ಬರವಣಿಗೆ ಮಾಧ್ಯಮವೆಂದು ಬರೆದಿದ್ದಾರೆಯೇ ಹೊರತು, ಮಕ್ಕಳಿಗಾಗಿ ಎಂದು ಬರೆದಿಲ್ಲ. ನನ್ನ 'ಟಾರ್ಗೆಟ್ ರೀಡರ್ಸ್' ಯಾವತ್ತೂ ಬರೀ ಮಕ್ಕಳಲ್ಲ. ಆದರೆ ಬರವಣಿಗೆಯೊಳಗೆ ಜಾನಪದ ಜಗತ್ತು, ಫ್ಯಾಂಟಸಿ, ಮನರಂಜನೆ ತಂತಾನೇ ಇರುವುದರಿಂದ ಸಹಜವಾಗಿ ಅಲ್ಲಿ ಮಕ್ಕಳಿರುತ್ತಾರೆ ಅಷ್ಟೆ.

**6**

ಮಕ್ಕಳ ಲೋಕ ನನಗಿಷ್ಟವಾದುದು. ಅದೇ ನನ್ನ ಪ್ರಧಾನ ಧಾರೆಯೆಂದು ಭಾವಿಸಿ ಬರೆಯುತ್ತಿರುವೆ. ಮಕ್ಕಳಿಗಾಗಿ, ದೊಡ್ಡವರಿಗಾಗಿ ಎಂದು ನೋಡುವುದಕ್ಕಿಂತಲೂ ಸಾಹಿತ್ಯದ ಅನನ್ಯತೆಯೇ ಮುಖ್ಯ. ನನ್ನ ಕೆಲವು ಕಥೆಗಳನ್ನು ಮಕ್ಕಳಿಗಿಂತ ದೊಡ್ಡವರೇ ಹೆಚ್ಚು ಇಷ್ಟಪಟ್ಟಿದ್ದಾರೆ. 'ನಾನು ದೊಡ್ಡವರಿಗಾಗಿ ಬರೆಯುತ್ತಿದ್ದರೂ ಅದರ ಮಧ್ಯೆಯೂ ಒಂದಷ್ಟು ಮಕ್ಕಳಿಗಾಗಿ ಬರೆದಿರುವೆ' ಎನ್ನುವ ಸಿಂಪಥೆಟಿಕ್ ಮನೋಭಾವವೇ ಈ ಥರದ ಪ್ರಶ್ನೆಗಳು ಉದ್ಭವವಾಗಲು ಕಾರಣವಾಗುತ್ತದೆ. ಅಧ್ಯಯನಕ್ಕೆ ಪ್ರಕಾರದ ಭೇದವಿದೆ. ಓದಿಗೆ ಆಸಕ್ತಿಯೊಂದೇ ಮಾನದಂಡ.

**7**

ನನಗೆ ಇಷ್ಟವಾದದ್ದನ್ನು ಬರೆದು ಸಂತಸಗೊಳ್ಳುವುದು, ಅದನ್ನು ಮಕ್ಕಳೊಂದಿಗೆ ಓದಿ ಅಭಿಪ್ರಾಯ ಪಡೆದುಕೊಳ್ಳುವುದನ್ನು ನಾನು ಪದೇಪದೇ ಮಾಡುತ್ತಿರುತ್ತೇನೆ. ಹಾಗೆ ಮಾಡುವಾಗ ಯಾವುದೋ ಒಂದು ಕಥೆಯನ್ನು ಮಕ್ಕಳ ತುಂಬ ಇಷ್ಟಪಟ್ಟಾಗ ನನ್ನ ಶ್ರಮ ಸಾರ್ಥಕವೆಂದು ಸಂಭ್ರಮಪಟ್ಟಿದ್ದೇನೆ. ಅನೇಕ ಮಕ್ಕಳು ಮತ್ತು ನನ್ನ ಹತ್ತಿರದ ಮಕ್ಕಳ ಸಾಹಿತ್ಯದಲ್ಲಿ ತುಂಬಾ ಆಸಕ್ತಿ ಇರುವ ಗೆಳೆಯರ ಬಳಗವೆಲ್ಲ ನನ್ನ ಇತ್ತೀಚಿನ ಪುಸ್ತಕವನ್ನು ತುಂಬಾ ಮೆಚ್ಚಿಕೊಂಡಿದ್ದು ನನಗೆ ಬಹು ದೊಡ್ಡ ಪ್ರಶಂಸೆ ಎನಿಸಿದೆ. ●